## ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್.ಸಿ ನ್ಯಾಯಾಲಯ ಜಮಖಂಡಿ

ಸಿ ಸಿ ನಂ.**30/2022**

| | | |
|---|---|---|
| ಆರೋಪಿಯ ಹೆಸರು | : | A-1) ಸದಾಶಿವ ಗೋಲಭಾವಿ ಹಾಗೂ ಇನ್ನೊಬ್ಬರು |
| ತಂದೆಯ ಹೆಸರು | : | ಹನಮಂತ |
| ವಯಸ್ಸು | : | 28 ವರ್ಷ |
| ಉದ್ಯೋಗ | : | ಚಾಲಕ |
| ವಾಸಸ್ಥಳ | : | ತುಂಗಳ, ತಾಃ ಜಮಖಂಡಿ. |

### ದಂಡ ಪ್ರಕ್ರಿಯಾ ಸಂಹಿತೆ ಕಲಂ.**313** ರ ಅಡಿಯಲ್ಲಿ ಆರೋಪಿಯ ಹೇಳಿಕೆ

ಪ್ರ.1) ಈ ಪ್ರಕರಣದಲ್ಲಿ ಸಾಕ್ಷಿದಾರರು ಹೇಳಿರುವುದನ್ನು ಕೇಳಿ ತಿಳಿದುಕೊಂಡಿದ್ದೀರಾ ?

ಉ:- ಕೇಳಿದ್ದೇನೆ.

ಪ್ರ.2) ಪ್ರಾ.ಸಾ-1– ಮೆಹರರಾಮ ಪುನರರಾಮ ಚೌಧರಿ ಇವರು ತಮ್ಮ ಸಾಕ್ಷ್ಯದಲ್ಲಿ ಹೇಳುವುದೇನೆಂದರೆ- ದಿಃ 02-03-2020 ರಂದು ತಾನು ತನ್ನ ಅಂಗಡಿಯ ಬಾಗಿಲನ್ನು ಮುಚ್ಚಿಕೊಂಡು ಹೋಗಿದ್ದು, ಮಾರನೇ ದಿನ ಬೆಳಿಗ್ಗೆ ಬಂದು ನೋಡಿದಾಗ ತಮ್ಮ ಅಂಗಡಿಯಲ್ಲಿ ಒಂದು ಹೆಚ್.ಪಿ.ಯ ಒಂದು ಮೋಟಾರು ಮತ್ತು 5 ಎಚ್.ಪಿ.ಯ ಎರಡು ಮೋಟಾರುಗಳು ಕಳ್ಳತನವಾಗಿದ್ದವು. ಸದರಿ ಮೋಟಾರುಗಳ ಕಿಮ್ಮತ್ತು ರೂ.6,000/- ಆಗುತ್ತಿದ್ದು, ನಂತರ ತಾನು ಪೋಲಿಸ ಠಾಣೆಯಲ್ಲಿ ಪ್ರಥಮ ವರ್ತಮಾನ ಹೇಳಿಕೆ ನೀಡಿದ್ದು, ಪೋಲಿಸರು ಸ್ಥಳಕ್ಕೆ ಬಂದು ಪರಿಶೀಲನೆ ಮಾಡಿ, ಸ್ಥಳಮಹಜರ ಮಾಡಿ, ಭಾವಚಿತ್ರಗಳನ್ನು ತೆಗೆದಿದ್ದು, ಆಗ ಸಮಯ 11 ರಿಂದ 12 ಗಂಟೆಯಾಗಿತ್ತು ಎಂದು ಸಾಕ್ಷ್ಯ ಹೇಳುತ್ತಾರೆ. ಇದಕ್ಕೆ ನೀವೇನು ಹೇಳುವಿರಿ ?

ಉ:- ಸುಳ್ಳು

ಪ್ರ.3) ಪ್ರಾ.ಸಾ-1–ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು ಹೇಳುವುದೇನೆಂದರೆ- ನಂತರ ತಾನು ಪೋಲಿಸರ ಮುಂದೆ ಮರುಹೇಳಿಕೆ ನೀಡಿದ್ದು, ತಾನು ಪ್ರಥಮ ವರ್ತಮಾನ ಹೇಳಿಕೆ ಕೊಟ್ಟ 2-3 ದಿನಗಳ ನಂತರ ಪೋಲಿಸರು ಆರೋಪಿತರನ್ನು ದಸ್ತಗೀರ ಮಾಡಿದ್ದು, ತಾನು ಪೋಲಿಸ್ ಠಾಣೆಗೆ ಹೋದಾಗ ಪೋಲಿಸರು ತನ್ನ ಕಳುವಾದಂತಹ ಮೋಟಾರಗಳು ಮತ್ತು ಆರೋಪಿತರನ್ನು ತನಗೆ ತೋರಿಸಿದ್ದು, ಆರೋಪಿತರ ಹೆಸರು ಸದಾಶಿವ ಮತ್ತು ಹನುಮಂತ ಎಂದು ಹೇಳಿದ್ದಾರೆ ಎಂದು ಸಾಕ್ಷ್ಯ ಹೇಳುತ್ತಾರೆ. ಇದಕ್ಕೆ ನೀವೇನು ಹೇಳುವಿರಿ ?

ಉ:- ಸುಳ್ಳು

ಪ್ರ.4) ಪ್ರಾ.ಸಾ-1–ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು ಹೇಳುವುದೇನೆಂದರೆ- ದಿನಾಂಕ 13.04.2022 ರಂದು ಪೋಲಿಸರು ತನ್ನ ಅಂಗಡಿಗೆ ಪಂಚನಾಮೆ ಮಾಡಲು ಬಂದಿದ್ದು, ತನ್ನ ಅಂಗಡಿಯಲ್ಲಿ ಬೆಳಿಗ್ಗೆ 11.00 ರಿಂದ ಮಧ್ಯಾಹ್ನ 1.00 ಗಂಟೆವರೆಗೆ ಪೋಲಿಸರು ಚಾಸಾ-2 ಮತ್ತು 3 ರವರ ಸಮಕ್ಷಮ ಪಂಚನಾಮೆ ಮಾಡಿರುತ್ತಾರೆ ಎಂದು ಸಾಕ್ಷ್ಯ ಹೇಳುತ್ತಾರೆ. ಇದಕ್ಕೆ ನೀವೇನು ಹೇಳುವಿರಿ ?

ಉ:- ಸುಳ್ಳು

ಪ್ರ.5) ಪ್ರಾ.ಸಾ-2– ಶ್ರೀಶೈಲ ಅರ್ಜುನ ಬಾಬಕರ ಇವರು ತಮ್ಮ ಸಾಕ್ಷ್ಯದಲ್ಲಿ ಹೇಳುವುದೇನೆಂದರೆ- ತಮ್ಮ ಅಂಗಡಿಯ ಎದುರಿನ ಅಂಗಡಿಯಲ್ಲಿ ಕಳ್ಳತನವಾಗಿದ್ದು, ಆ ವಿಚಾರವಾಗಿ ಪೋಲಿಸರು ತನ್ನನ್ನು ಕರೆದು ಭಾವಚಿತ್ರ ತೆಗೆದುಕೊಂಡಿದ್ದು, ಆಗ ಸಮಯ 12.50 ರಿಂದ 1.50 ಗಂಟೆ ಆಗಿತ್ತು. ನಂತರ ಪೋಲಿಸರು ತನ್ನನ್ನು ಠಾಣೆಗೆ ಕರೆದುಕೊಂಡು ಹೋಗಿ ಸಹಿ ತೆಗೆದುಕೊಂಡಿದ್ದಾರೆ. ನಂತರ ಪೋಲಿಸ್ ಠಾಣೆ ಹತ್ತಿರ ಪೋಲಿಸರು ಭಾವಚಿತ್ರಗಳನ್ನು ತೆಗೆದುಕೊಂಡು, ತನ್ನನ್ನು ಪೋಲಿಸ ಠಾಣೆಯ ಒಳಗಡೆ ಕರೆದುಕೊಂಡು ಹೋಗಿ ಸಹಿ ತೆಗೆದುಕೊಂಡಿರುತ್ತಾರೆ ಎಂದು ಸಾಕ್ಷ್ಯ ಹೇಳುತ್ತಾರೆ. ಇದಕ್ಕೆ ನೀವೇನು ಹೇಳುವಿರಿ ?

ಉ:- ಸುಳ್ಳು

ಪ್ರ.6) ಪ್ರಾ.ಸಾ-2– ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು ಹೇಳುವುದೇನೆಂದರೆ- ದಿನಾಂಕ 13-04-2022 ರಂದು ಪೋಲಿಸರು ತನ್ನ ಇನ್ನೊಂದು ಸಹಿಯನ್ನು ಠಾಣೆಯಲ್ಲಿ ತೆಗೆದುಕೊಂಡು, ತೋಟದಲ್ಲಿ ಭಾವಚಿತ್ರಗಳನ್ನು ತೆಗೆದುಕೊಂಡಿದ್ದಾರೆ. ಅದೇ ದಿನ ಪೋಲಿಸರು ಇನ್ನೊಂದು ಮಹಜರ ಮೇಲೆ ತನ್ನ ಸಹಿ ತೆಗೆದುಕೊಂಡು, ಭಾವಚಿತ್ರಗಳನ್ನು ತೆಗೆದುಕೊಂಡಿದ್ದಾರೆ ಎಂದು ಸಾಕ್ಷ್ಯ ಹೇಳುತ್ತಾರೆ. ಇದಕ್ಕೆ ನೀವೇನು ಹೇಳುವಿರಿ ?

ಉ:- ಸುಳ್ಳು

ಪ್ರ.7) ಪ್ರಾ.ಸಾ-3– ಪಡಿಯಪ್ಪ ಸತ್ಯಪ್ಪ ವಾಲಿಕರ, ಪೋಲಿಸ್ ಪೇದೆ, ಸಾವಳಗಿ ಪೋಲಿಸ್ ಠಾಣೆ ಇವರು ತಮ್ಮ ಸಾಕ್ಷ್ಯದಲ್ಲಿ ಹೇಳುವುದೇನೆಂದರೆ- ದಿನಾಂಕ 13-04-2022 ರಂದು ತಾನು ಮತ್ತು ಚಾಸಾ-8 ರವರು ಗಸ್ತು ಮಾಡುತ್ತಾ ಬಸ್ಸ್ಟ್ಯಾಂಡಿನಿಂದ ತುಂಗಳ ರಸ್ತೆ ಕಡೆಗೆ ಹೋಗುತ್ತಿದ್ದಾಗ, ಆರೋಪಿತರು ದ್ವಿಚಕ್ರ ವಾಹನದ ಮೇಲೆ ತುಂಗಳ ಕಡೆಯಿಂದ ಬಂದಿದ್ದು, ಒಬ್ಬ ಆರೋಪಿ ದ್ವಿಚಕ್ರ ವಾಹನದ ಮೇಲೆ ಮೋಟಾರ್ ಪಂಪನ್ನು ತೆಗೆದುಕೊಂಡು

ಬರುತ್ತಿದ್ದ, ಆತನನ್ನು ನಿಲ್ಲಿಸಿ ವಿಚಾರಿಸಿದಾಗ ಆತ ಹೆದರಿಕೊಂಡಿದ್ದು, ಆಗ ತಮಗೆ ಅನುಮಾನ ಬಂದು ತಾವು ಆರೋಪಿತರನ್ನು ಠಾಣೆಗೆ ಕರೆದುಕೊಂಡು ಹೋಗಿ ಚಾಸಾ-9 ರವರ ಮುಂದೆ ಹಾಜರುಪಡಿಸಿದ್ದು, ಅವರ ಹೆಸರು ಸದಾಶಿವ ಮತ್ತು ಹನುಮಂತ ಎಂದು ಸಾಕ್ಷ್ಯ ಹೇಳುತ್ತಾರೆ. ಇದಕ್ಕೆ ನೀವೇನು ಹೇಳುವಿರಿ ?

ಉ:- ಸುಳ್ಳು

ಪ್ರ.8) ಪ್ರಾ.ಸಾ-3– ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು ಹೇಳುವುದೇನೆಂದರೆ- ನಂತರ ಚಾಸಾ-9 ರವರು ಆರೋಪಿತರನ್ನು ವಿಚಾರಿಸಿದಾಗ, ಆರೋಪಿತರು ಅಮರ್ ಎಲೆಕ್ಟ್ರಾನಿಕ್ ಅಂಗಡಿಯಿಂದ ಮೋಟಾರಗಳನ್ನು ಕಳ್ಳತನ ಮಾಡಿ, 1 ನೇ ಆರೋಪಿ ಮೂರು ಮೋಟಾರುಗಳನ್ನು ಅವರ ತೋಟದ ಮನೆಯಲ್ಲಿ ಇಟ್ಟುಕೊಂಡಿದ್ದು, ಒಂದನ್ನು ಮಾರಾಟ ಮಾಡಲು ಬಂದಾಗ ಸಿಕ್ಕಿದ್ದೇವೆ ಎಂದು ಹೇಳಿದ್ದಾರೆ ಎಂದು ಸಾಕ್ಷ್ಯ ಹೇಳುತ್ತಾರೆ. ಇದಕ್ಕೆ ನೀವೇನು ಹೇಳುವಿರಿ ?

ಉ:- ಸುಳ್ಳು

ಪ್ರ.9) ಪ್ರಾ.ಸಾ-4– ಹನಮಂತ ನಿಂಗಪ್ಪ ಮಾಳಿ ಇವರು ತಮ್ಮ ಸಾಕ್ಷ್ಯದಲ್ಲಿ ಹೇಳುವುದೇನೆಂದರೆ- ದಿನಾಂಕ 03-03-2022 ರಂದು ತಾನು ಮತ್ತು ಚಾಸಾ-4 ರವರು ರಸ್ತೆ ಮೇಲೆ ಹೋಗುತ್ತಿದ್ದಾಗ, ಚಾಸಾ-1 ರವರ ಅಂಗಡಿಯಲ್ಲಿ ಕಳ್ಳತನವಾಗಿದೆ ಎಂದು ಗೊತ್ತಾಗಿದ್ದು, ಸದರಿ ಅಂಗಡಿಗೆ ತಾವು ಹೋಗಿ ನೋಡಿದಾಗ, ಅಂಗಡಿಯ ತಗಡಿನ ಶೆಡ್ಡಿನ ಸ್ಕ್ರೂನ್ನು ತೆಗೆದಿದ್ದರು. ತಾವು ಚಾಸಾ-1 ರವರನ್ನು ವಿಚಾರಿಸಿದಾಗ ಮೂರು ಮೋಟಾರುಗಳು ಕಳ್ಳತನವಾಗಿವೆ, ಪ್ರಥಮ ವರ್ತಮಾನ ಹೇಳಿಕೆ ಕೊಡುತ್ತೇನೆ ಎಂದು ಹೇಳಿರುತ್ತಾರೆ ಎಂದು ಸಾಕ್ಷ್ಯ ಹೇಳುತ್ತಾರೆ. ಇದಕ್ಕೆ ನೀವೇನು ಹೇಳುವಿರಿ ?

ಉ:- ಸುಳ್ಳು

ಪ್ರ.10) ಪ್ರಾ.ಸಾ-4– ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು ಹೇಳುವುದೇನೆಂದರೆ- ಒಂದು ತಿಂಗಳ ನಂತರ ಪೋಲಿಸರು ತನ್ನನ್ನು ಠಾಣೆಗೆ ಕರೆದಿದ್ದು, ಠಾಣೆಯಲ್ಲಿ ಆರೋಪಿತರು ಕುಳಿತಿದ್ದರು ಮತ್ತು ಮೂರು ಮೋಟಾರ್ ಪಂಪಸೆಟ್ ಇದ್ದವು. ಒಬ್ಬ ಆರೋಪಿಯ ಹೆಸರು ಹನುಮಂತ ಮತ್ತು ಇನ್ನೊಬ್ಬನ ಅಡ್ಡಹೆಸರು ಗೋಲಬಾವಿ ಎಂದು ಪೋಲಿಸರು ತನಗೆ ಹೇಳಿದ್ದಾರೆ ಎಂದು ಸಾಕ್ಷ್ಯ ಹೇಳುತ್ತಾರೆ. ಇದಕ್ಕೆ ನೀವೇನು ಹೇಳುವಿರಿ ?

ಉ:- ಸುಳ್ಳು

ಪ್ರ.11) ಪ್ರಾ.ಸಾ-5–ವಿಠಲ ಅಪ್ಪಾಸಾಬ ಜಾಧವ ಇವರು ತಮ್ಮ ಸಾಕ್ಷ್ಯದಲ್ಲಿ ಹೇಳುವುದೇನೆಂದರೆ- ದಿನಾಂಕ 03-02-2022 ರಂದು ಬೆಳಿಗ್ಗೆ 10 ಗಂಟೆಗೆ ತಾನು ಮತ್ತು ಚಾಸಾ-5 ರವರು

ಹೋಗುತ್ತಿದ್ದಾಗ, ಅಂಗಡಿಯಲ್ಲಿ ಕಳ್ಳತನವಾಗಿದೆ ಎಂದು ಗೊತ್ತಾಗಿ ಹೋಗಿ ನೋಡಿದಾಗ, ಅಲ್ಲಿ ಮೂರು ಪಂಪಸೆಟ್‌ಗಳು ಕಳ್ಳತನವಾಗಿದ್ದು, ಹಿಂದಿನ ಸೀಟನ್ನು ಎಬ್ಬಿಸಿ ಕಳ್ಳತನ ಮಾಡಿದ್ದರು. ಅಂಗಡಿಯ ಮಾಲಿಕರನ್ನು ತಾವು ವಿಚಾರಿಸಿದಾಗ, ಸದರಿಯವರು ಅಂಗಡಿಯನ್ನು ಮುಚ್ಚಿಕೊಂಡು ಹೋಗಿದ್ದು, ಮಾರನೇ ದಿನ ಬಂದು ನೋಡಿದಾಗ ಕಳ್ಳತನ ಆಗಿತ್ತು ಎಂದು ಹೇಳಿದರು ಎಂದು ಸಾಕ್ಷ್ಯ ಹೇಳುತ್ತಾರೆ. ಇದಕ್ಕೆ ನೀವೇನು ಹೇಳುವಿರಿ ?

ಉ:- ಸುಳ್ಳು

ಪ್ರ.12) ಪ್ರಾ.ಸಾ-5– ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು ಹೇಳುವುದೇನೆಂದರೆ- ನಂತರ ಚಾಸಾ-1 ರವರು ಕಳ್ಳತನ ಆಗಿದ್ದರ ಬಗ್ಗೆ ಪ್ರಥಮ ವರ್ತಮಾನ ಹೇಳಿಕೆ ನೀಡಿರುವುದಾಗಿ ಹೇಳಿದರು. ನಂತರ 15 ದಿನ ಅಥವಾ ಒಂದು ತಿಂಗಳ ಒಳಗಾಗಿ ಪೋಲಿಸರು ತಮ್ಮನ್ನು ಠಾಣೆಗೆ ಕರೆಸಿದ್ದು, ಠಾಣೆಯಲ್ಲಿ ಆರೋಪಿತರು ಇದ್ದು, ಪಂಪಸೆಟ್‌ಗಳು ಇದ್ದವು ಎಂದು ಸಾಕ್ಷ್ಯ ಹೇಳುತ್ತಾರೆ. ಇದಕ್ಕೆ ನೀವೇನು ಹೇಳುವಿರಿ ?

ಉ:- ಸುಳ್ಳು

ಪ್ರ.13) ಈ ಪ್ರಕರಣದ ಕುರಿತು ನಿಮಗೆ ಇನ್ನೇನಾದರೂ ಹೇಳುವುದು ಇದೆಯಾ ?

ಉಃ- ಇಲ್ಲ.

ಪ್ರ.14) ನಿಮ್ಮ ಪರವಾಗಿ ಸಾಕ್ಷಿ ವಿಚಾರಣೆಯನ್ನು ಮಾಡಿಸುವಿರಾ ?

ಉಃ- ಇಲ್ಲ.

(ಆರೋಪಿಯ ಹೇಳಿಕೆಯನ್ನು ನನ್ನ ಸ್ವ-ಹಸ್ತಾಕ್ಷರದಿಂದ ತೆರೆದ ನ್ಯಾಯಾಲಯದಲ್ಲಿ ಪಡೆದಿರುತ್ತೇನೆ )

ಸ್ಥಳ - ಜಮಖಂಡಿ
ದಿನಾಂಕಃ 05.11.2025

RAJASHEKHAR
Digitally signed by RAJASHEKHAR
Date: 2025.11.06 10:38:18 +0530

ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ. ಜಮಖಂಡಿ.